ಇಂಥದನ್ನ ನೀವೂ ಸಾವಿರ ಸಲ ನೋಡಿರಬಹುದು. ಹಿಂದಿನ ಕಾಲದ ಜಿಮ್ಮು ಅಂತ ಒನಕೆ, ಒರಳು ಕಲ್ಲು, ಬೀಸುವ ಕಲ್ಲು ದುಂಡಿ ಬಂಡೆ ಎಲ್ಲಾ ಇದ್ದ ಚಿತ್ರವನ್ನ ಗೆಳೆಯನೊಬ್ಬ ಕೆಲವು ವರ್ಷಗಳ ಹಿಂದೆ ವಾಟ್ಸ್‌ಆ್ಯಪಿನಲ್ಲಿ ಕಳಿಸಿದ್ದ.

ಅದನ್ನ ನೋಡಿದ್ದೇ ತಲೆ ಕೆಟ್ಟುಹೋಯಿತು. ಬೆಳಗ್ಗೆ ಎದ್ದರೆ ಹಲ್ಲು ಕೂಡ ಉಜ್ಜದೆ ಹಾಳು ಸುರಿಯುವ ಮುಖ ಹೊತ್ತು ಹಾಸಿಗೆಯಲ್ಲೇ ದುಪ್ಪಡಿ ಹೊಚ್ಚಿಕೊಂಡು ಚಾ ಕುಡಿಯುವವ ಇವನು. ಅವನ ಹೆಂಡತಿ ದಮ್ಮು ಕಟ್ಟಿಕೊಂಡು ಇಬ್ಬರೂ ಮಕ್ಕಳನ್ನು ಸ್ಕೂಲಿಗೆ ರೆಡಿ ಮಾಡಿ ಕಳಿಸುವ ತನಕ ಇವನು ರೂಮಿಂದ ಹೊರಗೆ ಕೂಡ ಬರುವುದಿಲ್ಲ. ಪಾಪದ ಹೆಣ್ಣುಮಗಳು ಇವನನ್ನ ಯಾವಾಗಲೂ ಬಯ್ಯುತ್ತಾಳಾದರೂ ಇವನೇನು ಅದಕ್ಕೆಲ್ಲಾ ಕೇರ್ ಮಾಡುವಷ್ಟು ದಡ್ಡ ಅಲ್ಲ.

"ಹಂಗೆಲ್ಲಾ ಹೆಂಣ್ತಿ ಮಾತ್ನ ತಲಿಗೆ ಹಚ್ಚಿಗ್ಯಬಾರದಪಜಿ... ಕ್ಯಲಸ ಜಾಸ್ತಿ ಆಕ್ಕಾವು. ಏನೋ ಹೆಣಮಕ್ಳು ಹ್ವಟ್ಟಿ ಸಂಕಟಕ್ಕ ಮಾತಾಡ್ತರ. ಅದ್ನೇ ಸೀರಿಯಸ್ ಆಗಿ ತಗಂಡ್ರ ನಮ್ಮುವೇ ಮು*ಳಿ ಹರೀತವು. ಸುಮ್ನ ಕ್ಯೇಳಿಸಿಗ್ಯಂಡಂಗ ಮಾಡಿ ಸ್ನಾನಕ್ಕ ಹೋಗಿಬಿಟ್ರ ತಾವಾ ಸುಮ್ಮಾಕ್ಕತಿ..." ಅಂತಿದ್ದ.

ಇಂಥಾ ಬುದ್ಧಿವಂತ ಹೆಣ್ಣುಮಕ್ಕಳ ಜಿಮ್ಮಿನ ಬಗ್ಗೆ ತಲೆ ಕೆಡಿಸಿಕೊಂಡು ಕುಹಕ ಮಾಡುವಷ್ಟು ಮಟ್ಟಿಗೆ ಮಂಗತನ ತೋರುತ್ತಿದ್ದಾನಲ್ಲ ಅಂತ ಸ್ವಲ್ಪ ಸಿಟ್ಟು–ಆಶ್ಚರ್ಯ ಒಟ್ಟಿಗೇ ಆಯಿತು. ಮಿಕ್ಸರು ಗ್ರೈಂಡರು ಮನೆಗೆ ಬರುವ ಮುನ್ನ ಗಂಡಸರ ಸೈಕಲ್ಲು, ಲೂನಾ ಇತ್ಯಾದಿ ಮನೆ ಪ್ರವೇಶ ಮಾಡಿದ್ದವು ಎನ್ನುವುದು ಅವನ ಗಮನಕ್ಕೇ ಬಂದಿರಲಿಲ್ಲ.

ಆದರೆ, ಇವೆಲ್ಲಾ ಚಾಟ್‌ನಲ್ಲಿ ಬಗೆಹರಿಯುವುದಿಲ್ಲ. ಅದಕ್ಕೆ ಅವನಿಗೆ ಫೋನ್ ಮಾಡಿದೆ.

'ಯಾರಿಗಪ ಇವ್ನೆಲ್ಲ ಜಿಮ್ಮು?'

'ಹಿಂದಿನ ಕಾಲದರಿಗೆ.'

'ಯಾರ್ ಮಾಡ್ತಿದ್ರು ಇವ್ನುಲ್ಲ?'

'ಹೆಣ್ಮಕ್ಕಳು...'

'ಗಂಡಸರೇನ್ ಮಾಡ್ತಿದ್ರು?'

'ಹೊಲ ಮನಿ ನೋಡ್ಕ್ಯಂತಿದ್ರು.'

'ಅದಕ್ಕ?'

'ಈಗಿನ ಕಾಲುದ್ ಹೆಣ್‌ಮಕ್ಳು ಮಿಕ್ಸಿ, ಫ್ರಿಜ್ಜು, ಗ್ರೈಂಡ್ರು... ಮೈಕ್ರೋವೇವು ಎಲ್ಲಾ ಇದ್ದೂ ಕ್ಯಲಸ ನೀಗ್ಸಂಗಿಲ್ಲ... ಮೈ ಬೆಳೆಸಿಗ್ಯಂದು ಕುಂತ್ಕಂತರೆ...'

'ಹೆಣ್‌ಮಕ್ಕಳ ವಿಷ್ಯ ಅತ್ಲಾಗ ಬಿಡು, ಹುಚ್ ಪ್ಯಾಲಿ ನೀನು.

